ಇ) ಈ ಸ್ಟೈಪೆಂಡರಿ ಪದವೀಧರರುಗಳನ್ನು ಮೇಲಿನ ದರ್ಜೆಯ ಸಹಾಯಕರುಗಳನ್ನಾಗಿ ಖಾಯಂಗೊಳಿಸಲಾಗುತ್ತಿದೆಯೇ;

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು;

ಉ) ಉಳಿದಂತಹ ಎಲ್ಲಾ ಸ್ಟೈಪೆಂಡರಿ ಪದವೀಧರರನ್ನು ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ

(ಕಾರ್ಮಿಕ ಸಚಿವರು)

5,000;

ರಾಜ್ಯದಲ್ಲಿನ ಮಿತವೇತನ ಪದವೀಧರರನ್ನು ಸಂಖ್ಯಾಧಿಕ ಹುದ್ದೆಗಳನ್ನು ಸೃಷ್ಟಿಸುವುದರ ಮೂಲಕ ಎರಡನೇ ದರ್ಜೆ ಸಹಾಯಕ ಹುದ್ದೆಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 106 ಇಸಿಎಸ್ 89 ದಿನಾಂಕ 17-8-91 ಮತ್ತು 5-9-91ರ ಆದೇಶದಲ್ಲಿ ಸ್ಥಾಯೀ ನಿಯುಕ್ತಿಗೊಳಿಸಲಾಗಿತ್ತು. ಆದರೆ ಮಿತವೇತನ ಪದವೀಧರರು ತಮ್ಮನ್ನು ಪ್ರಥಮ ದರ್ಜೆ ಸಹಾಯಕ ಹುದ್ದೆಗಳಲ್ಲಿ ಸ್ಥಾಯೀ ನೀಯುಕ್ತಿಗೊಳಿಸಲು ಸಲ್ಲಿಸಿದ ರಿಟ್ ಅರ್ಜಿ ಸಂಬಂಧ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆಸದರೀ ಆದೇಶಗಳನ್ನು, ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 106 ಇಸಿಎಸ್ 89, ದಿನಾಂಕ : 2-5-92 ರಂದು ಹಿಂತೆಗೆದುಕೊಳ್ಳಲಾಗಿದೆ. ಪ್ರಸ್ತುತ ಈ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಇದ್ದು ಅಂತಿಮ ತೀರ್ಪಿನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ : – ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರುಗಳನ್ನಾಗಿ ಪರಿಗಣಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 148(153)

ಶ್ರೀ ಪಿ.ಸಿ.ಸಿದ್ದನಗೌಡರ್(ಕಲಘಟಗಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು

ಆ) ಅವರುಗಳಿಗೆ ಪ್ರತಿ ತಿಂಗಳಿಗೆ ನೀಡುವ ಗೌರವಧನವೆಷ್ಟು ;

ಇ) ಈ ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರುಗಳನ್ನಾಗಿ ಪರಿಗಣಿಸುವ ವಿಷಯ ಸರ್ಕಾರದ ಮುಂದಿದೆಯೆ?

ಶ್ರೀ ಧರ್ಮಸಿಂಗ್

(ಸಮಾಜ ಕಲ್ಯಾಣ ಸಚಿವರು)

25741

1) ಎಸ್‌ಎಸ್‌ಎಲ್‌ಸಿ ಪಾಸಾಗದೆ ಇದ್ದವರಿಗೆ – 350 : ರೂ.

2) ಎಸ್‌ಎಸ್‌ಎಲ್‌ಸಿ ಪಾಸಾಗದೆ 5 ವರ್ಷ ಸೇವೆ ಸಲ್ಲಿಸಿದವರಿಗೆ 375 : ರೂ.

3) ಎಸ್‌ಎಸ್‌ಎಲ್‌ಸಿ ಪಾಸಾಗದೆ 10ವರ್ಷ ಸೇವೆ ಸಲ್ಲಿಸಿದವರಿಗೆ–400 : ರೂ.

4) ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ – 400 : ರೂ.

5) ಎಸ್‌ಎಸ್‌ಎಲ್‌ಸಿ ಪಾಸಾಗಿದ್ದು 5 ವರ್ಷ ಸೇವೆ ಸಲ್ಲಿಸಿದವರಿಗೆ - 425 : ರೂ.

6)ಎಸ್‌ಎಸ್‌ಎಲ್‌ಸಿ ಪಾಸಾಗಿದ್ದು 10 ವರ್ಷ ಸೇವೆ ಸಲ್ಲಿಸಿದವರಿಗೆ -450 : ರೂ.

ಇಲ್ಲ

ವಿಷಯ : - ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪದವೀಧರ ಯುವಕರಿಗೆ ನಿರುದ್ಯೋಗ ಭತ್ಯೆ ನೀಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 149(154)

ಶ್ರೀ ಪಿ.ಸಿ.ಸಿದ್ದನಗೌಡರ್(ಕಲಘಟಗಿ)

ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ;

ಅ) ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿ ಪದವೀಧರರುಗಳ ಸಂಖ್ಯೆ ಎಷ್ಟು?

ಆ) ಆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿ ಪದವೀಧರರುಗಳಿಗೆ ನಿರುದ್ಯೋಗಿ ಭತ್ಯೆಯನ್ನು ನೀಡುವ ವಿಷಯ ಸರ್ಕಾರದ ಮುಂದಿದೆಯೇ?

ಶ್ರೀ ಬ್ಲೇಸಿಂಯಸ್ ಎಂ. ಡಿಸೋಜ

(ಕಾರ್ಮಿಕ ಸಚಿವರು)

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿ ಪದವೀಧರರುಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

-ಇಲ್ಲ-

ವಿಷಯ : - ಹುಬ್ಬಳ್ಳಿಯಲ್ಲಿ ಅನಿವಾಸಿ ಭಾರತೀಯರ ನೆರವಿನಿಂದ ಸಹಕಾರಿ ನೂಲಿನ ಗಿರಣಿಯನ್ನು ತೆರೆಯುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 150(155)

ಶ್ರೀ ಪಿ.ಸಿ.ಸಿದ್ದನಗೌಡರ್(ಕಲಘಟಗಿ)

ಮಾನ್ಯ ಜವಳಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯಲ್ಲಿ ಸಂಜಯ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸಲು ಅನಿವಾಸಿ ಭಾರತೀಯರು ಫಂಡಿಂಗ್ ಏಜೆನ್ಸಿಸ್ ಮುಂದೆ ಬಂದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ಗಿರಣಿಗೆ ಅನಿವಾಸಿ ಭಾರತೀಯರ ಫಂಡಿಂಗ್ ಏಜೆನ್ಸೀಯಿಂದ ನೆರವನ್ನು ಪಡೆಯಲು ರಾಜ್ಯ ಸರ್ಕಾರ ಗ್ಯಾರಂಟಿ ನೀಡುತ್ತದೆಯೇ?

ಶ್ರೀ ಹೆಚ್.ಕೆ.ಪಾಟೀಲ್

(ಜವಳಿ ರಾಜ್ಯ ಸಚಿವರು)

-ಹೌದು-

ಸರ್ಕಾರವು ಆ ಸಂಸ್ಥೆಯೊಂದಿಗೆ ಚರ್ಚಿಸಿ ತನ್ನ ನಿಲುವನ್ನು ತೆಗೆದುಕೊಳ್ಳುವುದು.